# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 28-10-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಬೇಡಿಕೆ ಇಳಿಕೆ, ಪಾಮೆಣ್ಣೆ ಫ್ಯೂಚರ್ ದರ ಇಳಿಕೆ

ಪರ್ಯಾಯ ಖಾದ್ಯತೈಲಗಳ ಜಾಗತಿಕ ದರ ಇಳಿಕೆ, ದಲಿಯನ್ ಮಾರುಕಟ್ಟೆಯಲ್ಲಿ ಪಾಮೆಣ್ಣೆ ದರ ಕುಸಿತ ಹಾಗೂ ಬೇಡಿಕೆ ಕುಸಿತದ ಹಿನ್ನಲೆಯಲ್ಲಿ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 2.41 ಶೇಕಡಾ ಇಳಿಕೆಯಾಗಿ 4047 ರಿಂಗಿಟ್ಸ್ ($ 857.60) ಆಗಿದೆ. ಪೆಟ್ರೋಲಿಯಂ ಪ್ರೊಡ್ ಆಯಿಲ್ ದರ ಇಳಿಕೆಯೂ ಪಾಮೆಣ್ಣೆ ದರ ಇಳಿಕೆಗೆ ಪೂರಕವಾಯಿತು.

## *ಛತ್ತೀಸ್‌ಗಢದ ಸರಕಾರ ರೈತರಿಂದ 11 ಮಿಲಿಯನ್ ಟನ್ ಭತ್ತ ಖರೀದಿಗೆ ಪ್ರಯತ್ನ*

ಈ ವರ್ಷ ಛತ್ತೀಸ್‌ಗಢದ ಸರಕಾರ ರೈತರಿಂದ 11 ಮಿಲಿಯನ್ ಟನ್ ಭತ್ತ ಮಾರಾಟಮಾಡಬಹುದೆಂದು ನಿರೀಕ್ಷಿಸುತ್ತಿದ್ದು, ಇದು ಖರೀದಿಗೆ ಅಲ್ಲಿನ ಸರಕಾರ ಯೋಜಿಸುತ್ತಿದೆಯೆನ್ನಲಾಗಿದ್ದು, ಬೆಂಬಲ ಬೆಲೆಯ ಮೂಲಕ ಖರೀದಿ ಮಾಡಲಿದೆಯೆನ್ನಲಾಗಿದೆ. ಹಿಂದಿನ ವರ್ಷ 98 ಲಕ್ಷ ಟನ್ ಭತ್ತ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಲಾಗಿತ್ತೆನ್ನಲಾಗಿದೆ.

## *ಅಧಿಕ ಮಳೆಗೆ ಖಟಾವಿಗೆ ತಯಾರಾದ ಭತ್ತದ ಬೆಳೆಗೆ ಹಾನಿ*

ಉತ್ತರ ಭಾರತದ ರಾಜ್ಯಗಳಲ್ಲಿ ಸೈಕ್ಲೋನ್ ಪರಿಣಾಮದಿಂದ ಸುರಿದ ಅಧಿಕ ಮಳೆಯಿಂದಾಗಿ ಖಟಾವಿಗೆ ತಯಾರಾದ ಭತ್ತದ ಬೆಳೆಗೆ ಹಾನಿಯಾಗಿದೆಯೆನ್ನಲಾಗಿದ್ದು (ಉತ್ತರಪ್ರದೇಶ, ಪಶ್ಚಿಮ ಬಂಗಾಲ ಮತ್ತು ಆಂಧ್ರಪ್ರದೇಶ) ಉತ್ಪಾದನೆ ಹಿಂದಿನ ವರ್ಷದ ಉತ್ಪಾದನೆಗಿಂತ ಹಾಗೂ ಈ ಮೊದಲಿನ ಅಂದಾಜಿಗಿಂತ ಕಡಿಮೆಯಾಗಬಹುದೆನ್ನಲಾಗಿದೆ. ಇದರಿಂದ ಭಾರತದಲ್ಲಿ ಅಕ್ಕಿ ದರ ಹೆಚ್ಚಳವಾಗಿದೆ. ನೆರೆಯ ಬಾಂಗ್ಲಾ ದೇಶದಲ್ಲಿ ಅಧಿಕ ಮಳೆಯ ಪರಿಣಾಮ ಭತ್ತದ ಬೆಳೆ ವ್ಯಾಪಕ ಹಾನಿಗೊಂಡು ಉತ್ಪಾದನೆ ಬಹಳ ಇಳಿಕೆ ಕಾಣಬಹುದೆನ್ನಲಾಗಿದೆ.